## 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ

## ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಸ್ಪೆಷಲ್ ಕೇಸ ನಂಃ 290/2022

ಪಿಡಬ್ಲು :1 ಸಿಡಬ್ಲು :1

ಸಾಕ್ಷಿಯ ಹೆಸರು : ಶ್ರೀ ಸುನೀಲ ಶಂಕರ ಗಾಡಿವಡ್ಡರ

ತಂದೆಯ ಹೆಸರು : ಶ್ರೀ ಶಂಕರ ಗಾಡಿವಡ್ಡರ

ವಯಸ್ಸು : 30 ವರ್ಷ

ಉದ್ಯೋಗ : ಜೆ.ಸಿ.ಬಿ ಆಪರೇಟರ

ವಾಸ್ತವ್ಯ : ಸುಟ್ಟಟ್ಟಿ ಗ್ರಾಮ, ತಾಲೂಕುಃ ಅಥಣಿ

ದಿನಾಂಕ : 26-09-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

[ಸಾಕ್ಷಿ ದೂರುದಾರರಾಗಿದ್ದು ದೂರಿನಲ್ಲಿ ತಮ್ಮ ಹೆಸರನ್ನು ಸುನೀಲ ಶಂಕರ ಗಾಡಿವಡ್ಡರ ಎಂದು ಬರೆದಿದ್ದು, ತಮ್ಮ ಸಹಿ ಇರುವುದಾಗಿ ಒಪ್ಪಿಕೊಂಡಿರುತ್ತಾರೆ. ಆದರೆ ದೋಷಾರೋಪಣೆ ಪಟ್ಟಿಯಲ್ಲಿ ದೂರುದಾರರ ಹೆಸರನ್ನು ಶಂಕರ ಸುನೀಲ ಗಾಡಿವಡ್ಡರ ಎಂದು ಬರೆದಿದ್ದು, ದೂರುದಾರರು ಶಂಕರ ಎನ್ನುವುದು ತಮ್ಮ ತಂದೆಯ ಹೆಸರು ಎಂದು ಹೇಳಿದ್ದು, ದೂರನ್ನು ಮತ್ತು ಪ್ರಥಮ ವರ್ತಮಾನ ವರದಿಯನ್ನು ಪರಿಶೀಲಿಸಲಾಗಿ ಸಾಕ್ಷಿದಾರರ ಹೆಸರು ಸುನೀಲ ಶಂಕರ ಗಾಡಿವಡ್ಡರ ಎಂದು ಪರಿಗಣಿಸಿ ಮುಖ್ಯ ವಿಚಾರಣೆಯನ್ನು ತೆಗೆದುಕೊಳ್ಳಲಾಯಿತು.]

### ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ

ಚಾಸಾಃ 9 ರಿಂದ ಚಾಸಾಃ 17 ನನಗೆ ಗೊತ್ತಿರುತ್ತಾರೆ. ಅವರು ನಮ್ಮ ಊರಿನವರು. ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗಿರುವ 1 ರಿಂದ 3, 5 ರಿಂದ 8 ನೇ ಆರೋಪಿತರು ನಮ್ಮ ಊರಿನವರು, ನನಗೆ ಗೊತ್ತಿರುತ್ತಾರೆ. ವಿಚಾರಣೆಗೆ ಗೈರು

ಹಾಜರಾಗಿರುವ 4 ನೇ ಆರೋಪಿ ಸಹ ನನಗೆ ಗೊತ್ತಿರುತ್ತಾರೆ. ಆರೋಪಿತರ ಪರ ವಕೀಲರು 4 ನೇ ಆರೋಪಿಯ ಗೈರು ಹಾಜರಾತಿಯನ್ನು ಅಲ್ಲಗಳೆಯುವುದಿಲ್ಲ ಎಂದು, ಗೈರು ಹಾಜರಿಯನ್ನು ಮನ್ನಿಸಬೇಕೆಂದು ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿಯನ್ನು ಪುರಸ್ಕರಿಸಲಾಗಿದೆ.

2. ನಾನು ಪರಿಶಿಷ್ಟ ಜಾತಿಯ ಹಿಂದೂ ವಡ್ಡರ ಜಾತಿಗೆ ಸೇರಿದ್ದೇನೆ. ಆರೋಪಿತರು ಮಾಳಿ ಜಾತಿಗೆ ಸೇರಿದ್ದಾರೆ. ದಿನಾಂಕಃ 14-09-2022 ರಂದು ನಾನು ಮತ್ತು ನನ್ನ ಅತ್ತೆ ಮಗ ಚಾಸಾಃ 8 ಸುರೇಶ ಗಾಡಿವಡ್ಡರ ಅವರು ಡಾಃನಾಗೇಶ ಮೋರೆ ಅವರ ಆಸ್ಪತ್ರೆಗೆ ಮುಲಾಮು ತರಲು ಹೋಗಿದ್ದೇವು. ನಾವಿಬ್ಬರೂ ಚಾಸಾಃ 16 ಚಂಪವ್ವ ಕರಜಗಿ ಅವರ ಮನೆಯ ಮುಂದೆ ನಿಂತಿದ್ದೇವು. 1 ನೇ ಆರೋಪಿ ಮಲ್ಲೇಶ ಮಾಳಿ ಮತ್ತು 2 ನೇ ಆರೋಪಿ ಸುರೇಶ ಮಾಳಿ ಅವರು ಮೋಟರಸೈಕಲನಲ್ಲಿ ನಾವು ನಿಂತಿದ್ದ ಜಾಗಕ್ಕೆ ಬಂದರು. ನನ್ನ ಅತ್ತೆ ಮಗ ಚಾಸಾಃ 8 ಸುರೇಶ ಗಾಡಿವಡ್ಡರ ಅವರೊಂದಿಗೆ ಗಾಡಿಯಲ್ಲಿ ಕುಳಿತುಕೊಳ್ಳುವಂತೆ ಕರೆದರು, ಆತನು ಬರುವುದಿಲ್ಲ ಎಂದು ಹೇಳಿದನು. 2 ನೇ ಆರೋಪಿ ಗಾಡಿಯಿಂದ ಕೆಳಗೆ ಇಳಿದು ಚಾಸಾಃ 8 ರವರನ್ನು ಬಲವಂತವಾಗಿ ಗಾಡಿಯ ಮೇಲೆ ಕೂರಿಸಿಕೊಂಡು 1 ನೇ ಆರೋಪಿಯ ತೋಟಕ್ಕೆ ಕರೆದುಕೊಂಡು ಹೋದರು. ಯಾವ ಕಾರಣಕ್ಕೆ ಕರೆದುಕೊಂಡು ಹೋದರು ಎಂದು ನನಗೆ ಆಗ ಗೊತ್ತಾಗಲಿಲ್ಲ. ಆಗ ಸಂಜೆ ಸಮಯ 6:00 ಗಂಟೆ ಆಗಿತ್ತು. ನಂತರ ನಾನು ಚಾಸಾಃ 9 ಸಾಬು ಗಾಡಿವಡ್ಡರ, ಚಾಸಾಃ 10 ಅಶೋಕ ಗಾಡಿವಡ್ಡರ, ಚಾಸಾಃ11 ಅಜಿತ ಗಾಡಿವಡ್ಡರ, ಚಾಸಾಃ 12 ರಾಜು ಗಾಡಿವಡ್ಡರ ಅವರಿಗೆ ಫೋನ ಮೂಲಕ ವಿಚಾರ ತಿಳಿಸಿದೆನು.

3. ನಂತರ ನಾವು 5 ಜನ ಸೇರಿ 1 ನೇ ಆರೋಪಿ ಮನೆಗೆ ಹೋದೇವು. ಮನೆಯಲ್ಲಿ 1 ನೇ ಆರೋಪಿ ಇರಲಿಲ್ಲ, ಆದರೆ ಅವರ ತಂದೆ ಜ್ಞಾನದೇವ ಎನ್ನುವವರು ಇದ್ದರು. ನಾವು ಅವರ ಮನೆಯಲ್ಲಿದ್ದಾಗಲೇ 1 ಮತ್ತು 2 ನೇ ಆರೋಪಿತರು ಅಲ್ಲಿಗೆ ಬಂದರು. ನಾವು ಅವರನ್ನು ಚಾಸಾಃ 8 ಸುರೇಶ ಎಲ್ಲಿ ಎಂದು ವಿಚಾರಿಸಿದೇವು, ಅದಕ್ಕೆ 1 ನೇ ಆರೋಪಿ

ಚಾಸಾಃ 8 ಸುರೇಶ ನನ್ನ ತಂಗಿ ಚಾಸಾಃ 17 ರಾಜಶ್ರೀ ಇವರಿಗೆ ಪೋನ ಮಾಡಿ ಕಾಡಿಸುತ್ತಿದ್ದಾನೆ ಎಂದು, ಆತನನ್ನು ಬಿಡುವುದಿಲ್ಲ ಎಂದು ಹೇಳಿ, 6 ನೇ ಆರೋಪಿ ಹನಮಂತ ಮಾಳಿ ಇವರು ರಾಗೋಲನಿಂದ ಚಾಸಾಃ 12 ರಾಜು ಅವರಿಗೆ ಹೊಡೆಯಲು ಪ್ರಯತ್ನಿಸಿದ್ದು, ಅವರು ತಪ್ಪಿಸಿಕೊಂಡಿದ್ದರಿಂದ 1 ನೇ ಆರೋಪಿಯ ತಂದೆ ಜ್ಞಾನದೇವ ಅವರ ತಲೆಗೆ ಪೆಟ್ಟು ಬಿತ್ತು. 8 ನೇ ಆರೋಪಿ ನನಗೆ ಮತ್ತು ಚಾಸಾಃ 9 ಸಾಬು ಇವರಿಗೆ ಬೋರ ಮೋಟರ ಕೇಬಲ ವಾಯರನಿಂದ ಹೊಡೆದರು. 4 ಮತ್ತು 5 ನೇ ಆರೋಪಿತರು ನಮ್ಮೊಂದಿಗೆ ಬಂದಿದ್ದ ಚಾಸಾಃ 10 ಮತ್ತು ಚಾಸಾಃ 11 ರವರಿಗೆ ಹೊಡೆದರು, ಆದರೆ ಯಾವುದರಿಂದ ಹೊಡೆದರು ಎಂದು ನನಗೆ ಗೊತ್ತಿಲ್ಲ.  ನಮಗೆ ಜಾತಿ ಹೆಸರು ಹಿಡಿದು ಬೈದು, ನಿಮಗೆ ಊರಿನಲ್ಲಿ ಬಾಳ್ವೆ ಮಾಡಲು ಬಿಡುವುದಿಲ್ಲ ನಿಮ್ಮನ್ನು ಕೊಂದು ಹಾಕುತ್ತೇವೆ ಎಂದು ಬೆದರಿಕೆ ಹಾಕಿದರು. ಘಟನೆಯ ಸಮಯದಲ್ಲಿ ನಾವು ಓಡಿ ನಮ್ಮ ಮನೆಗೆ ಹೋದೇವು, ಆಗ ಸಮಯ 7:00 ಗಂಟೆ ಆಗಿತ್ತು.

4. ಚಾಸಾಃ 12 ರಾಜು ಗಾಡಿವಡ್ಡರ ಇವರನ್ನು ಆರೋಪಿತರು ಹಿಡಿದುಕೊಂಡಿದ್ದರು. ಚಾಸಾಃ 9 ಸಾಬು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೇವು. ನಾನು ಮನೆಗೆ ಹೋಗಿ ಹಿರಿಯನ್ನು ಕರೆದುಕೊಂಡು ಪುನಃ ಆರೋಪಿತರ ಮನೆಗೆ ಬಂದೇವು. ಆ ಸಮಯದಲ್ಲಿ ನನ್ನ ಅತ್ತೆ ಮಗ ಸುರೇಶನನ್ನು ಸಹ ಆರೋಪಿತರು ಕರೆದುಕೊಂಡು ಬಂದಿದ್ದರು. ಚಾಸಾಃ 8 ಸುರೇಶನಿಗೆ ಬಾವಿ ಹತ್ತಿರ ಕರೆದುಕೊಂಡು ಹೋಗಿ ಕೇಬಲ್ ವಾಯರನಿಂದ ಹೊಡೆದಿದ್ದೇವೆ ಎಂದು 1 ಮತ್ತು 2 ನೇ ಆರೋಪಿತರು ಹೇಳಿದರು. ನಂತರ ಚಾಸಾಃ 8 ಸುರೇಶನನ್ನು ಅಥಣಿಯಲ್ಲಿರುವ ಗುಂಜಗಾವಿ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋದೇವು.

5. ಎರಡು ದಿನಗಳು ಮನೆಯಲ್ಲಿ ಹಿರಿಯರ ಜೊತೆ ಮಾತನಾಡಿ ದಿನಾಂಕಃ 16-09-2022 ರಂದು ಐಗಳಿ ಪೋಲಿಸ ಠಾಣೆಗೆ ದೂರನ್ನು ನಾನೇ ಕೊಟ್ಟಿದ್ದೇನೆ. ದೂರನ್ನು ನಿಪಿ-1 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 [ಎ] ಎಂದು

ಗುರುತಿಸಲಾಯಿತು. ದೂರಿನ ಮೇಲೆ ನಾನು ಸಹಿ ಮತ್ತು ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೇನೆ ಎಂದು ಹೇಳಿದ್ದಾರೆ.

6. ಆರೋಪಿತರು ಚಾಸಾಃ 8 ಸುರೇಶ ಅವರನ್ನು ಕರೆದುಕೊಂಡು ಹೋದ ಮೋಟರಸೈಕಲ ಹೊಂಡಾ ಕಂಪನಿಯ ಹೆಚ್.ಎಫ್ ಡಿಲೆಕ್ಸ ಆಗಿತ್ತು. ಅದರ ನಂಬರ KA-23/ED-2832 [ 4 ನೇ ಆರೋಪಿ ಈ ವಾಹನವನ್ನು ನ್ಯಾಯಾಲಯವು ಮಧ್ಯಂತರ ಅರ್ಜಿಯ ಮೇಲೆ ದಿನಾಂಕಃ 18-05-2023 ರಂದು ಮಾಡಿದ ಆದೇಶದ ಪ್ರಕಾರ ವಾಹನವನ್ನು ಮಧ್ಯಂತರ ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದು ಆರೋಪಿತರ ಪರ ವಕೀಲರು ಹೇಳಿಕೆ ನೀಡಿದ್ದು, ಅದರಂತೆ ನ್ಯಾಯಾಲಯದ ಕಡತದಲ್ಲಿ ಆದೇಶ ಹಾಗೂ ಮುಚ್ಚಳಿಕೆ ಪತ್ರ ಇರುವುದು ಕಂಡುಬರುತ್ತದೆ ಮತ್ತು ವಾಹವನ್ನು ಮುದ್ದೆ ಮಾಲಾಗಿ ಗುರುತಿಸಲು ತಮ್ಮ ತಕರಾರು ಇರುವುದಿಲ್ಲ ಎಂದು ಆರೋಪಿತರ ಪರ ವಕೀಲರು ಹೇಳಿದ್ದಾರೆ.] ವಾಹನದ ಪೋಟೋದ ಮೇಲೆ ವಾಹನವನ್ನು ಮು.ಮಾ.1 ಎಂದು ಗುರುತಿಸಲಾಯಿತು. 4 ನೇ ಆರೋಪಿ ನ್ಯಾಯಾಲಯಕ್ಕೆ ಬರೆದುಕೊಟ್ಟಿರುವ ಮುಚ್ಚಳಿಕೆ ಪತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು.

7. ಆರೋಪಿತರು ನಮಗೆ ಹಲ್ಲೆ ಮಾಡಲು ಉಪಯೋಗಿಸಿದ ಕೇಬಲ ವಾಯರ ಮತ್ತು ಕಬ್ಬಿಣದ ರಾಗೋಲನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಜರುಮಾಡಿರುವ ವಸ್ತುಗಳನ್ನು ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರವರು ಮನವಿಯನ್ನು ಮಾಡಿರುತ್ತಾರೆ. ಮನವಿಯನ್ನು ಪರಿಗಣಿಸಿ ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಬಿಳಿಯ ಬಣ್ಣದ ಬಟ್ಟೆಯಿಂದ ಸುತ್ತಿರುವ ಹಾಗೂ ಪಂಚನಾಮೆ ಕಾಲದಲ್ಲಿ ಮಾಡಿರುವ ಸೀಲನ್ನು ಗುರುತಿಸಿ ಒಂದು ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ಕಬ್ಬಿಣದ ರಾಗೋಲನ್ನು ಮು.ಮಾ.2 ಎಂದು ಗುರುತಿಸಲಾಯಿತು. ಇನ್ನೊಂದು ಭಾಂಗಿಯನ್ನು ತೆರೆದ

ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದದ್ದ ಕಪ್ಪು ಬಣ್ಣದ 89 ಇಂಚು ಉದ್ದ ಇರುವ ಪಂಪಸೆಟ್ ಮೋಟರ ಕೇಬಲ ವಾಯರನ್ನು ಮು.ಮಾ.3 ಎಂದು, ಇನ್ನೊಂದು ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದದ್ದ ಕಪ್ಪು ಬಣ್ಣದ 94 ಇಂಚು ಉದ್ದ ಇರುವ ಪಂಪಸೆಟ್ ಮೋಟರ ಕೇಬಲ ವಾಯರನ್ನು ಮು.ಮಾ.4 ಎಂದು ಗುರುತಿಸಲಾಯಿತು.

8. ದೂರು ನೀಡಿದ ನಂತರ ಪೋಲಿಸರು ಪಂಚನಾಮೆ ಮಾಡಲು 1 ನೇ ಆರೋಪಿಯ ಮನೆಯ ಬಳಿ ಹಾಗೂ ಚಾಸಾಃ 16 ಚಂಪವ್ವ ಅವರ ಮನೆಯ ಬಳಿ ಬಂದಿದ್ದರು. ಪೋಲಿಸರಿಗೆ ನಾನೇ ಸ್ಥಳವನ್ನು ತೋರಿಸಿದ್ದೇನೆ. ಪೋಲಿಸರು 1 ನೇ ಆರೋಪಿಯ ಮನೆಯ ಮುಂದೆ ಮಧ್ಯಾಹ್ನ 3:30 ಯಿಂದ 3:45 ರವರೆಗೆ ಸಾಕ್ಷಿದಾರರಾದ ಚಾಸಾಃ2 ಮಾಯಪ್ಪ ಮತ್ತು ಚಾಸಾಃ 3 ಮಹಾವೀರ ಅವರ ಸಮಕ್ಷಮ ಪಂಚನಾಮೆಯನ್ನು ಡಿ.ವೈ.ಎಸ್.ಪಿ ಅವರು ಮಾಡಿದರು. ಪಂಚನಾಮೆ ಸಮಯದಲ್ಲಿ ಪೋಲಿಸರು ಪೋಟೋ ತೆಗೆದಿರುತ್ತಾರೆ. ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಲಾಗಿ ಅದರಲ್ಲಿ 1 ನೇ ಆರೋಪಿಯ ಮನೆ ಮುಂದೆ ಪಂಚನಾಮೆ ಮಾಡುವ ಕಾಲಕ್ಕೆ ತೆಗೆಯಲಾದ ಪೋಟೋ ಎಂದು ಗುರುತಿಸಿದ್ದು, ಅದರಲ್ಲಿ ತಮ್ಮ ಇರುವಿಕೆಯನ್ನು, ಡಿ.ವೈ.ಎಸ್.ಪಿ ಅವರ ಇರುವಿಕೆಯನ್ನು ಹಾಗೂ ಚಾಸಾಃ 2 ಮತ್ತು ಚಾಸಾಃ 3 ರವರ ಇರುವಿಕೆಯನ್ನು ಗುರುತಿಸಿದ್ದಾರೆ. ಪೋಟೋ ವಿದ್ಯುನ್ಮಾನ ದಾಖಲೆಯಾಗಿದ್ದು ಅದನ್ನು ಗುರುತಿಸುವಿಕೆಗೆ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿದೆ ಆ ಕಾರಣ ಪೋಟೋವನ್ನು ನಿಪಿ–3 ಎಂದು ಗುರುತಿಸಲಾಯಿತು.

9. ಅದೇ ರೀತಿಯಾಗಿ ಪೋಲಿಸರು ಚಾಸಾಃ 16 ಚಂಪವ್ವ ಕರಜಗಿ ಅವರ ಮನೆಯ ಮುಂದೆ ಚಾಸಾಃ 8 ರವರನ್ನು ಆರೋಪಿತರು ಕರೆದುಕೊಂಡು ಹೋದ ಜಾಗ ಎಂದು ತೋರಿಸಿದ್ದು, ಸದರಿ ಸ್ಥಳದಲ್ಲಿ ಪೋಲಿಸರು ಸಂಜೆ 5:00 ರಿಂದ 5:30 ರವರೆಗೆ ಚಾಸಾಃ 2 ಮಾಯಪ್ಪ ಮತ್ತು ಚಾಸಾಃ 3 ಮಹಾವೀರ ಇವರ ಸಮಕ್ಷಮ ಪಂಚನಾಮೆಯನ್ನು

ಮಾಡಿದರು. ಆ ಸಮಯದಲ್ಲಿ ಪೋಟೋವನ್ನು ತೆಗೆಯಲಾಗಿದೆ. ಅದರಲ್ಲಿ ತಮ್ಮ ಇರುವಿಕೆಯನ್ನು, ಡಿ.ವೈ.ಎಸ್.ಪಿ ಅವರ ಇರುವಿಕೆಯನ್ನು ಹಾಗೂ ಚಾಸಾಃ 2 ಮತ್ತು ಚಾಸಾಃ3 ರವರ ಇರುವಿಕೆಯನ್ನು ಗುರುತಿಸಿದ್ದಾರೆ. ಪೋಟೋಗಳನ್ನು ನಿಪಿ–4 ಮತ್ತು ನಿಪಿ–5 ಎಂದು ಗುರುತಿಸಲಾಯಿತು. ಡಿ.ವೈ.ಎಸ್.ಪಿ ಅವರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ.ಎಮ್.ಎಸ್.ಪಿ ವಕೀಲರಿಂದ</u>**

ನಾನು ಪೋಲಿಸರಿಗೆ ದೂರನ್ನು ಕೈಬರವಣಿಗೆಯಲ್ಲಿ ಬರೆಸಿಕೊಟ್ಟಿದ್ದೇನೆ. ನಾನು ಅವಿದ್ಯಾವಂತನಿದ್ದೇನೆ. ನಾನು ಸಹಿ ಮಾತ್ರ ಮಾಡುತ್ತೇನೆ. 1 ಮತ್ತು 2 ನೇ ಆರೋಪಿತರು ಚಾಸಾಃ 8 ಸುರೇಶನಿಗೆ ಹೊಡೆದಿದ್ದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ನಾನು ದೂರು ನೀಡಿದ ಮರುದಿನ ಪೋಲಿಸರು ಪಂಚನಾಮೆ ಮಾಡಲು ಬಂದಿದ್ದರು. ಪೋಲಿಸರು ನನಗೆ ಪೋನ ಮಾಡಿ ಊರಿನ ಒಳಗೆ ಬರುವಂತೆ ಹೇಳಿದ್ದರು.

2. ಪಂಚನಾಮೆ ಮಾಡಲು ಪೋಲಿಸರಿಗೆ ನಾನೇ ಸ್ಥಳ ತೋರಿಸಿದೇನು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾಃ 8 ಸುರೇಶ ನನ್ನ ಸಂಬಂಧಿಕನಾಗಿದ್ದರಿಂದ ಅವರ ಮಾತು ಕೇಳಿ ನಾನು ಸುಳ್ಳು ದೂರು ನೀಡಿದ್ದೇನೆ ಎನ್ನುವುದು ಸರಿಯಲ್ಲ.

ಪ್ರಶ್ನೆಃ 1 ನೇ ಆರೋಪಿಯ ಮನೆಗೆ ನೀವು ಹೋಗಿದ್ದೇವು ಎಂದು ಹೇಳುವ ಸಮಯದಲ್ಲಿ ಯಾವ ಆರೋಪಿತರು ಯಾರಿಗೆ ಹೊಡೆದರು ?
ಉತ್ತರಃ ಆರೋಪಿತರು ನನಗೆ, ಚಾಸಾಃ 9 ಸಾಬು, ಚಾಸಾಃ 10 ಅಶೋಕ ಗಾಡಿವಡ್ಡರ, ಚಾಸಾಃ 11 ಅಜಿತ ಗಾಡಿವಡ್ಡರ ಮತ್ತು ಚಾಸಾಃ 12 ರಾಜು ಗಾಡಿವಡ್ಡರ ಅವರಿಗೆ ಹೊಡೆದಿರುತ್ತಾರೆ.

**ಈ ಹಂತದಲ್ಲಿ ನ್ಯಾಯಾಲಯದ ಮುಂಜಾನೆ ಅವಧಿ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗಾಗಿ ಮಧ್ಯಾಹ್ನದ ಅವಧಿಗೆ ಕಾಯ್ದಿರಿಸಲಾಯಿತು.**

**ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲು: ಆರೋಪಿತರ ಪರ ಶ್ರೀ.ಎಮ್.ಎಸ್.ಪಿ ವಕೀಲರಿಂದ</u>**

3. 1 ಮತ್ತು 2 ನೇ ಆರೋಪಿತರು ಚಾಸಾಃ 8 ಸುರೇಶ ಅವರನ್ನು ಬಲವಂತವಾಗಿ ಗಾಡಿ ಮೇಲೆ ಕೂರಿಸಿಕೊಂಡು ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 1 ನೇ ಆರೋಪಿಯ ಮನೆ ಹಾಗೂ ಚಾಸಾಃ 16 ಚಂಪವ್ವ ಅವರ ಮನೆಯ ಮುಂದಿನ ಜಾಗವನ್ನು ಪೋಲಿಸರಿಗೆ ನಾನು ತೋರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 1 ನೇ ಆರೋಪಿಯ ಮನೆಯ ಮುಂದೆ ಹಾಗೂ ಚಾಸಾಃ 16 ಚಂಪವ್ವ ಅವರ ಮನೆಯ ಮುಂದೆ ನಾನು ತೋರಿಸಿದ ಸ್ಥಳದಲ್ಲಿ ಪೋಲಿಸರು ಪಂಚನಾಮೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

4. ಚಾಸಾಃ 8 ಸುರೇಶ ನನ್ನ ಸಂಬಂಧಿಕನಾಗಿದ್ದರಿಂದ ಅವರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.